ದಿನಾಂಕ 02-04-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎಸ್ ವಕೀಲರಿಂದ.**

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಗೊತ್ತಿದೆ. ನನ್ನ ತಂದೆ ಹನುಮಣ್ಣ ರವರ ತಂದೆಯ ಹೆಸರು ಯಲಗೌಡ ಆಗಿರುತ್ತದೆ. ಯಲಗೌಡ ರವರ ತಂದೆಯ ಹೆಸರು ಗೊತ್ತಿಲ್ಲ. ಯಲಗೌಡ ರವರಿಗೆ ಇಬ್ಬರು ಮಕ್ಕಳು ಅವರು ಯಂಕಪ್ಪ ಮತ್ತು ಶಂಕ್ರಪ್ಪ ಆಗಿರುತ್ತಾರೆ. ಯಂಕಪ್ಪ ರವರು ನನಗೆ ಸಂಬಂಧದಲ್ಲಿ ದೊಡ್ಡಪ್ಪ ಆಗಬೇಕು. ನನಗೆ ಸಂಬಂಧಿಸಿದ ಯಾವುದೇ ಆಸ್ತಿಗಳು ಇರುವುದಿಲ್ಲ, ಸಾಕ್ಷಿ ಮುಂದುವರೆದು ಇದ್ದ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಮಗೆ ಇದ್ದ ಆಸ್ತಿಗಳನ್ನು ಯಂಕಪ್ಪ ರವರು ಮಾರಾಟ ಮಾಡಿದ್ದು ಯಂಕಪ್ಪ ರವರು ನಮ್ಮ 8 ಎಕರೆ ಜಮೀನನ್ನು ಮಾರಾಟ ಮಾಡಿ ಬಂದ ಆದಾಯದಿಂದ ಮಸೀದಾಪೂರ ಊರಿನಲ್ಲಿ ಜಮೀನನ್ನು ಖರೀದಿ ಮಾಡಿದ್ದರು. ನಮ್ಮ ಕುಟುಂಬದ ಆಸ್ತಿಗಳನ್ನು ನನ್ನ ತಂದೆ ಹನುಮಣ್ಣ ರವರು ಮಾರಾಟ ಮಾಡಿರುತ್ತಾರೆ. ನನ್ನ ತಂದೆ ನಮ್ಮ ಜಮೀನುಗಳನ್ನು ಮಾರಾಟ ಮಾಡಿ ಸುಮಾರು 40 ವರ್ಷ ಆಗಿರುತ್ತದೆ. ಮಸೀದಾಪೂರದಲ್ಲಿ ನಮಗೆ ಸಂಬಂಧಿಸಿದ ಹೊಲ ಮತ್ತು ಮನೆ ಇರುವುದಿಲ್ಲ. ಈ ದಾವೆಯನ್ನು ಮಲ್ಲಿಕಾರ್ಜುನ ರವರು ಹೂಡಿರುತ್ತಾರೆ. ಈ ದಾವೆಯನ್ನು ಲಕ್ಷ್ಮಣ ರವರ ವಿರುದ್ಧ ಮಾತ್ರ ಅಂದರೆ 4 ನೇ ಪ್ರತಿವಾದಿಯ ವಿರುದ್ಧವಾಗಿ ಮಾತ್ರ ಹೂಡಲಾಗಿದೆ. ಈ ದಾವೆಯನ್ನು ಜಮೀನಿನ ಮೇಲೆ ಹೂಡಿದ್ದು ಏನು ಪರಿಹಾರ ಕೇಳಿ ಹೂಡಿರುತ್ತಾರೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ 536 ವಿಸ್ತೀರ್ಣ 8 ಎಕರೆ ಇರುತ್ತದೆ. ಸರ್ವೆ ನಂಬರ 536 ರ ಜಮೀನು ಈಗ ಯಾರ ಹೆಸರಿನಲ್ಲಿ ಇರುತ್ತದೆ ಗೊತ್ತಿಲ್ಲ. ಸರ್ವೆ ನಂಬರ 536 ಈ ಮೊದಲು ಯಾರ ಹೆಸರಿನಲ್ಲಿತ್ತು ಗೊತ್ತಿಲ್ಲ. ಸರ್ವೆ ನಂಬರ 536 ಈಗ ಇರುವವರ ಹೆಸರಿನಲ್ಲಿ ಯಾವ ರೀತಿಯಾಗಿ ಆಗಿರುತ್ತದೆ ಗೊತ್ತಿಲ್ಲ. ಸರ್ವೆ ನಂಬರ 536 ನ್ನು ಹೊರತುಪಡಿಸಿ ನನಗೆ ಬೇರೆ ಜಮೀನುಗಳ ಬಗ್ಗೆ ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸರ್ವೆ ನಂಬರ 536 ರ ಜಮೀನಿನ ಬಗ್ಗೆ ಬರೆಸಿದ್ದನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನುಗಳ ಬಗ್ಗೆ ವಿವರಣೆಯನ್ನು ಬರೆಸಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸರ್ವೆ ನಂಬರ 536 ರ ಜಮೀನಿಗೆ ಸಂಬಂಧಿಸಿದಂತೆ ಇರುವ ವಿವರಣೆಯನ್ನು ಹೊರತುಪಡಿಸಿ ಬೇರೆ ಏನು ಇರುತ್ತದೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 536 ರ ಜಮೀನನ್ನು ಹೊರತುಪಡಿಸಿ ನನಗೆ ಬೇರೆ ಜಮೀನುಗಳ ಬಗ್ಗೆ ಮಾಹಿತಿ ಇರುವುದಿಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ವಾದಿ ನನ್ನ ದೊಡ್ಡಪ್ಪನ ಮಗ ಎಂದು ಅವರ ಪರವಾಗಿ ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ನಿಜ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು

ಬರೆಯಲಾಗಿದೆ ನನಗೆ ಗೊತ್ತಿಲ್ಲ ನನಗೆ ಗೊತ್ತಾಗದ ಹಾಗೇ ಅವುಗಳನ್ನು ಬರೆಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿಯ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.